ಇದ್ದ ಕಡೆಯ 'ಕಟ್ ಆಫ್ ಡೇಟ್'ಗೆ ಕೆಲವೇ ಕೆಲವು ದಿನಗಳ ಮೊದಲು ನ್ಯಾಯಾಲಯದ ತೀರ್ಪು ಹೊರಬಂದಿತ್ತು. ದೀಪಾ ಮಲ್ಲಿಕ್ ಅವರ ಪರ ನ್ಯಾಯವಿತ್ತು. ದೀಪಾ ಮಲ್ಲಿಕ್ ಅವರ ಕಣ್ಣಲ್ಲಿ ನೀರು ಧಾರಾಕಾರವಾಗಿ ಹರಿಯಿತು.

## ಜಗದ ಕ್ರೀಡಾರಂಗಕ್ಕೆ

2016ರ ಸೆಪ್ಟೆಂಬರ್ ತಿಂಗಳು, ಪ್ಯಾರಲಿಂಪಿಕ್ಸ್‌ನ ಭಾರತ ತಂಡದ ಅತ್ಯಂತ ಹಿರಿಯ ವಯಸ್ಸಿನ ಕ್ರೀಡಾಪಟುವಾಗಿ ದೀಪಾ ಬ್ರೆಜಿಲ್‌ನ ರಿಯೋದಲ್ಲಿ ಬಂದು ಇಳಿದರು. ದೀಪಾ ತಮ್ಮ 46ರ ವಯಸ್ಸಿನಲ್ಲಿ ವಿಶ್ವದ ಅತಿ ದೊಡ್ಡ ಕ್ರೀಡಾ ವೇದಿಕೆಗೆ ಪ್ರವೇಶಿಸುತ್ತಿದ್ದರು. ಭಾರತದ ಬ್ಲೇಸರ್ ತೊಟ್ಟು, ಒಲಿಂಪಿಕ್ಸ್‌ನ ಉದ್ಘಾಟನಾ ಉತ್ಸವದಲ್ಲಿ ಭಾಗಿಯಾಗುವ ಅವರ ಕನಸು ನನಸಾಗಿತ್ತು.

ಸೆಪ್ಟೆಂಬರ್ 14, 2016. ಪ್ಯಾರಲಿಂಪಿಕ್ಸ್‌ನಲ್ಲಿ ದೀಪಾ 'ನಿಂತಿದ್ದರು' ತಮ್ಮ ಗಾಲಿಕುರ್ಚಿಯಲ್ಲಿ. ತಾವು ಮುಗ್ಗರಿಸಿ ಬೀಳದಂತೆ ಕುರ್ಚಿಗೆ ಬಿಗಿದ ಬೆಲ್ಟ್. ಈಗ ಎಸೆತಕ್ಕೆ ಸಿದ್ಧವಾದ ಶಾಟ್‌ಪುಟ್ ಅವರ ಕೈಯಲ್ಲಿತ್ತು. ಬದುಕು ಅವರಿಗೆ ಆ ಒಂದು ಅವಕಾಶವನ್ನು ಕೊಟ್ಟಿತ್ತು; ಗಹಗಹಿಸಿ ನಕ್ಕವರಿಗೆ ತಮ್ಮ 'ಅಸಾಮರ್ಥ್ಯ'ದಾಚೆನ ಸಾಮರ್ಥ್ಯವನ್ನು ತೋರುವ ಒಂದೇ ಒಂದು ಅವಕಾಶವನ್ನು. ಕಾರಣ ಮತ್ತೊಂದು ಒಲಿಂಪಿಕ್ಸ್ ಹೊತ್ತಿಗೆ ಅವರು 50ರ ಗಡಿ ತಲುಪಲಿದ್ದರು. ಒಲಿಂಪಿಕ್ಸ್‌ಗೆ ತಯಾರಾಗಬೇಕಿದ್ದ ಅಮೂಲ್ಯ ಸಮಯವನ್ನೆಲ್ಲ ಕೋರ್ಟು ಕಚೇರಿಯ ಅಲೆದಾಟದಲ್ಲಿ ಕಳೆಯುವಂತೆ ಮಾಡಿ, ತಮ್ಮ ತಾಕತ್ತನ್ನು ಶಂಕಿಸಿದ ಟೀಕಾಕಾರರಿಗೆ ಉತ್ತರಿಸುವ ಒಂದು ಅವಕಾಶ. ಈ ಒಂದು ಅವಕಾಶ ಅವರ ಇಷ್ಟೆಲ್ಲ ವರ್ಷಗಳ ಒಂದೊಂದು ಬೆವರಿನ ಹನಿಯನ್ನೂ ಬೇಡಿತ್ತು. 'ಧಮ್ ಇದ್ದರೆ ರಿಯೋದಲ್ಲಿ ಎಸೆದು ತೋರಿಸು' ಎಂಬ ಕುಹಕದ ಮಾತು ಅವರ ಕಿವಿಯಲ್ಲಿ ಮೊಳಗಿತ್ತು. ಆ ಪಂಥಾಹ್ವಾನಕ್ಕೆ ಉತ್ತರಿಸುವ ಕ್ಷಣ ಬಂದಿತ್ತು. ಮೆಲ್ಲನೆ ದೀಪಾ ಅವರ ಎಡಗೈ ಗಾಲಿಕುರ್ಚಿಗೆ ಬೆಸುಗೆ ಹಾಕಿ ಅಂಟಿಸಿದ್ದ ಕಬ್ಬಿಣದ ನೇರನಿಂತ ದಂಡವನ್ನು ಬಿಗಿಯಾಗಿ ಹಿಡಿಯಿತು. ದೀಪಾ ತಮ್ಮೆಲ್ಲ ಭುಜಬಲ ಬಾಹುಬಲವನ್ನು ಒಗ್ಗೂಡಿಸಿ ಶಾಟ್‌ಪುಟ್ ಒಗೆದರು, ತಮ್ಮ ಶಕ್ತಿ ಮೀರಿದ ದೂರಕ್ಕೆ. ಅದೋ ಅದು ಹಾರಿ ಬಿದ್ದಿತ್ತು, ಅವರೂ ಕೂಡ ಎಣಿಸದಷ್ಟು ದೂರಕ್ಕೆ. ಅವರು ಅಲ್ಲಿಯವರೆಗೂ ಎಸೆದಿಲ್ಲದ 4.61 ಮೀಟರುಗಳ ದೂರಕ್ಕೆ ಇಂದು ಎಸೆದಿದ್ದರು!



ಮದುಮಗಳ ಸಂಭ್ರಮದಲ್ಲಿ ದೀಪಾ

ದೀಪಾ ಶಾಟ್‌ಪುಟ್ ಎಸೆತದಲ್ಲಿ ಬೆಳ್ಳಿಯ ಪದಕವನ್ನು ಪಡೆದರು. ಭಾರತದ ಧ್ವಜ ಪ್ಯಾರ ಒಲಿಂಪಿಕ್ಸ್‌ನಲ್ಲಿ ಹಾರಿದಾಗ ಅವರ ಎದೆ ಅಭಿಮಾನದಿಂದ ಉಬ್ಬಿತು. ದೀಪಾ ಪ್ಯಾರ ಒಲಿಂಪಿಕ್ಸ್‌ನಲ್ಲಿ ಪದಕ ಪಡೆದ ಮೊಟ್ಟ ಮೊದಲ ಭಾರತೀಯ ಮಹಿಳೆ ಆಗಿದ್ದರು. ದಿಲ್ಲಿಯ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿದಾಗ ಅದೆಂತಹ ಅದ್ಭುತ ಸ್ವಾಗತ ಅವರಿಗೆ ಕಾದಿತ್ತು. ಭಾರತಕ್ಕೆ ಪದಕವನ್ನು ಗೆದ್ದು ತಂದ ದೀಪಾ ಅವರಿಗೆ ಹರಿಯಾಣದ ಸರ್ಕಾರ ನಾಲ್ಕು ಕೋಟಿ ರೂಪಾಯಿಗಳನ್ನು ಬಹುಮಾನವಾಗಿ ನೀಡಿತು.

ದೀಪಾ ತಮ್ಮ 48ರ ವಯಸ್ಸಿನಲ್ಲೂ ಕ್ರೀಡೆಯಲ್ಲಿ ಭಾಗವಹಿಸಿದರು. 2018ರಲ್ಲಿ ಜಕಾರ್ತಾದಲ್ಲಿ ನಡೆದ 'ಏಷಿಯಾ ಪ್ಯಾರಾ ಗೇಮ್ಸ್'ನಲ್ಲಿ ಡಿಸ್ಕಸ್ ಎಸೆತ ಮತ್ತು ಜಾವೆಲಿನ್ ಎಸೆತದಲ್ಲಿ ಎರಡು ಕಂಚಿನ ಪದಕಗಳನ್ನು ಗೆದ್ದರು. ಸತತವಾಗಿ ಮೂರು ಪ್ಯಾರಾ ಏಷಿಯನ್ ಗೇಮ್ಸ್‌ಗಳಲ್ಲಿ (2010, 2014, 2018) ಪದಕ ಪಡೆದ ಏಕೈಕ ಭಾರತೀಯ ಮಹಿಳೆಯೂ ಇವರಾದರು. 2018ರಲ್ಲಿಯೇ ದುಬಾಯಿಯಲ್ಲಿ ನಡೆದ 'ವರ್ಲ್ಡ್ ಪ್ಯಾರಾ ಅಥ್ಲೆಟಿಕ್ ಗ್ರಾಂಡ್ ಪ್ರಿಕ್ಸ್'ನಲ್ಲಿ ಜಾವೆಲಿನ್ ಎಸೆತದಲ್ಲಿ ಚಿನ್ನದ ಪದಕವನ್ನು ಗಳಿಸಿದರು; ಅವರ 'ಎಫ್53' ಕ್ಯಾಟಗರಿಯಲ್ಲಿ ವಿಶ್ವದ 'ನಂಬರ್ ಒನ್' ಆದರು. ದೀಪಾ ಮಲ್ಲಿಕ್ ಒಟ್ಟು 58 ರಾಷ್ಟ್ರೀಯ ಪದಕಗಳನ್ನು, 23 ಅಂತರರಾಷ್ಟ್ರೀಯ ಪದಕಗಳನ್ನು ಗಳಿಸಿದ್ದಾರೆ.

ದೀಪಾ ಮಲ್ಲಿಕ್ ಅವರಿಗೆ ಇಸವಿ 2017ರಲ್ಲಿ 'ಪದ್ಮಶ್ರೀ' ಪುರಸ್ಕಾರ ದೊರೆಯಿತು. 2019ರಲ್ಲಿ 'ರಾಜೀವ್‌ಗಾಂಧಿ ಖೇಲ್ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಅವರಿಗೆ ಎರಡು ಗೌರವ ಡಾಕ್ಟರೇಟ್ ಡಿಗ್ರಿಗಳು ಕೂಡಾ ಬಂದಿವೆ. ಕಳೆದ ವರ್ಷ 2020ರಲ್ಲಿ ದೀಪಾ ಮಲ್ಲಿಕ್ ಭಾರತದ 'ಪ್ಯಾರಲಿಂಪಿಕ್ಸ್ ಕಮಿಟಿ'ಯ ಅಧ್ಯಕ್ಷರಾದರು. ಕಮಿಟಿಯ ಪದಾಧಿಕಾರಿಗಳು ಕ್ರೀಡೆಯಿಂದ ನಿವೃತ್ತರಾಗಬೇಕಾದ ನಿಯಮವಿದೆ. ಇಂದು ದೀಪಾ ಕ್ರೀಡೆಯ ಸ್ಪರ್ಧೆಗಳಿಂದ ನಿವೃತ್ತರಾದರೂ ಅವರ ಬದುಕನ್ನು ನೋಡುವ ಕ್ರೀಡಾ ಮನೋಭಾವ ಬದಲಾಗಿಲ್ಲ.

ಅಂದಹಾಗೆ, ಅವರ ಎರಡನೇ ಮಗಳು ಅಂಬಿಕಾ ಎಂ.ಬಿ.ಎ. ಮಾಡಿ ಕಾರ್ಪೊರೇಟ್ ಜಗತ್ತನ್ನು ಪ್ರವೇಶಿಸಿದ್ದಾರೆ. ಆದರೆ ಅರ್ಧ ದೇಹದ ಮೇಲಿನ ನಿಯಂತ್ರಣವನ್ನು ಎಳೆಯ ವಯಸ್ಸಿಗೇ ಕಳೆದುಕೊಂಡಿದ್ದ ಮೊದಲ ಮಗಳು ದೇವಿಕಾ?

ತಾಯಿಯಾಗಿ ದೀಪಾ ಮಲ್ಲಿಕ್ ತಮ್ಮ ಮಗಳ ಎದುರು ಶಕ್ತ ಮಾದರಿಯಾಗಿ ನಿಂತಿದ್ದರು. ದೇವಿಕಾ ಅಂತರರಾಷ್ಟ್ರೀಯ ಮಟ್ಟದ ಪ್ಯಾರ–ಅಥ್ಲೀಟ್ ಆಗಿ ಬೆಳೆದರು. ತಾಯಿಯ ಜೊತೆಗೂಡಿ ದೇವಿಕಾ, 'ವ್ಹೀಲಿಂಗ್ ಹ್ಯಾಪಿನೆಸ್ ಫೌಂಡೇಷನ್ ಎಬಿಲಿಟೀಸ್ ಬಿಯಾಂಡ್ ಡಿಸೆಬಿಲಿಟಿ' ಸಂಸ್ಥೆಯನ್ನು ಸ್ಥಾಪಿಸಿ, ದಿವ್ಯಾಂಗರಿಗೆ ಬೆಂಬಲವಾಗಿದ್ದಾರೆ, ಅವರ ದನಿಯಾಗಿದ್ದಾರೆ. ಇವರ ಕೆಲಸ ಭಾರತದ ಪ್ರಧಾನಿಯವರ ಮೆಚ್ಚುಗೆಯನ್ನು ಗಳಿಸಿದೆ. ರಾಣಿ ಎಲಿಜಬೆತ್ ಅವರಿಂದ 2015ರಲ್ಲಿ ದೇವಿಕಾ, 'ಯಂಗ್ ಲೀಡರ್ಸ್' ಪ್ರಶಸ್ತಿಯನ್ನು ಸ್ವೀಕರಿಸಿದರು. 2018ರಲ್ಲಿ 'ಯುನೈಟೆಡ್ ನೇಷನ್ಸ್ ಇನ್ ಇಂಡಿಯಾ'ದ 'ವಿಮೆನ್ ಟ್ರಾನ್ಸ್‌ಫಾರ್ಮಿಂಗ್ ಇಂಡಿಯಾ' ಪುರಸ್ಕಾರವನ್ನು ಉಪರಾಷ್ಟ್ರಪತಿಗಳಿಂದ ಸ್ವೀಕರಿಸಿದರು.

ಬದುಕು ಸವಾಲಾದ ಹೊತ್ತಿನಲ್ಲಿ ದೀಪಾ ಮಲ್ಲಿಕ್ ನಮಗೆ ನೆನಪಾಗಲಿ. ಅವರು ಬದುಕಿನತ್ತ ತಳೆದ ಕ್ರೀಡಾ ಮನೋಭಾವ ನಮಗೆ ಮಾದರಿಯಾಗಲಿ. ವಿಧಿ ಬರೆದ ಬರಹವನ್ನು ಅಳಿಸಲು ಸ್ಫೂರ್ತಿಯಾಗಲಿ. ಬದುಕಿನ ಪ್ರತಿಕೂಲ ಪರಿಸ್ಥಿತಿಗಳನ್ನು ದಿಟ್ಟತನದಿಂದ ಎದುರಿಸಿ ನಿಂತ ಈ ತಾಯಿಮಗಳಿಗೆ, ಇಬ್ಬರು ಕ್ರೀಡಾಪಟುಗಳಿಗೆ ಇಂದು ನಮ್ಮ ಹೃದಯ ತುಂಬಿದ ನಮನ.

**ಪ್ರತಿಕ್ರಿಯಿಸಿ: feedback@sudha.co.in**